GULBARGA UNIVERSITY
"Jnana Ganga", GULBARGA - 585 106, Karnataka, India.
Student Welfare Office

☎: 08472-263216
Fax: 08472-263206
E-Mail: root @guluni.kar.nic.in
Grams: UNIGUL

ಸಂ:ಗುವಿಗು/ವಿಕವಿ/2017-18/77 ದಿನಾಂಕ: 22.11.2017

ಸುತ್ತೋಲೆ

ವಿಷಯ: ಸಹಕಾರ ಕುರಿತು ಅಂತರ ಮಹಾವಿದ್ಯಾಲಯ ಚರ್ಚಾ ಸ್ಪರ್ಧೆ.

ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ 07.12.2017 ರಂದು ಬೆಳಿಗ್ಗೆ 10.30 ಗಂಟೆಗೆ ಗುಲಬರ್ಗಾ ವಿಶ್ವವಿದ್ಯಾಲಯ ಅಂತರ ಮಹಾವಿದ್ಯಾಲಯ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಇದರಲ್ಲಿ ಮಹಾವಿದ್ಯಾಲಯಗಳಿಗೆ ಮತ್ತು ಸ್ನಾತಕೋತ್ತರ ಕೇಂದ್ರಗಳಿಗೆ ಪ್ರತ್ಯೇಕವಾಗಿ ಜರುಗಿಸಲಾಗುವ ಚರ್ಚಾ ಸ್ಪರ್ಧೆಯಲ್ಲಿ ಇಬ್ಬರು ವಿದ್ಯಾರ್ಥಿಗಳನ್ನು ಆರಿಸಿ ಅಂತರ ವಿಶ್ವವಿದ್ಯಾಲಯ ಚರ್ಚಾ ಸ್ಪರ್ಧೆಗೆ ಕಳುಹಿಸಲಾಗುವುದು.

ಮಹಾವಿದ್ಯಾಲಯಗಳ ಪ್ರಾಂಶುಪಾಲರು ಹಾಗೂ ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥರು ತಮ್ಮ ಮಹಾವಿದ್ಯಾಲಯಗಳಿಂದ/ವಿಭಾಗಗಳಿಂದ ಇಬ್ಬರು ವಿದ್ಯಾರ್ಥಿಗಳನ್ನು (ಒಬ್ಬರು ಪರ – ಇನ್ನೊಬ್ಬರು ವಿರೋಧವಾಗಿ) ಈ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಲು ಕಳುಹಿಸಲು ಕೋರಲಾಗಿದೆ.

ಭಾಗವಹಿಸುವ ವಿದ್ಯಾರ್ಥಿಗಳು ತಮ್ಮ ಪ್ರಾಂಶುಪಾಲರಿಂದ/ಮುಖ್ಯಸ್ಥರಿಂದ ಪರಿಚಯ ಪತ್ರವನ್ನು ಹಾಗೂ ತಮ್ಮ ಗುರುತು ಪತ್ರವನ್ನು ತರಬೇಕು. ಸಂಬಂಧಿಸಿದ ವಿವರಗಳೊಂದಿಗೆ ವಿದ್ಯಾರ್ಥಿ ಕಲ್ಯಾಣಾಧಿಕಾರಿ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ಇವರಿಗೆ 30.11.2017ರ ಒಳಗಾಗಿ ತಲುಪುವಂತೆ ಕಳುಹಿಸಬೇಕಾಗಿ ವಿನಂತಿ.

ವಿಷಯ:
1. ಭಾರತದ ಬಡತನ, ನಿವಾರಣೆಗೆ ಸಹಕಾರ ಸಂಸ್ಥೆಗಳೇ ಸರಿಯಾದ ಸಾಧನಗಳು. (ಪದವಿ ವಿದ್ಯಾರ್ಥಿಗಳಿಗಾಗಿ)
2. ರೈತರ ಆತ್ಮಹತ್ಯೆ ತಪ್ಪಿಸಲು ಸಹಕಾರ ಸಂಘಗಳು ನೆರವಾಗಬಲ್ಲದು. (ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ)

ಭಾಷೆ: ಕನ್ನಡ, ಕಾಲಾವಕಾಶ 4 + 1 ನಿಮಿಷ
ಬಹುಮಾನ ಪ್ರಥಮ, ದ್ವಿತೀಯ ಹಾಗೂ ತೃತೀಯ ನಗದು ಬಹುಮಾನಗಳನ್ನು ಕೊಡಲಾಗುವುದು.
ಸ್ಥಳ "MAHATMA GHANDI HALL, Adm Building" ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

22.11.2017

ಪ್ರೊ. ಕೆ. ಸಿದ್ದಪ್ಪ
ವಿದ್ಯಾರ್ಥಿ ಕಲ್ಯಾಣಾಧಿಕಾರಿ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಗೆ.
೧. ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಸಂಲಗ್ನಿತ ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರ ಗಮನಕ್ಕಾಗಿ.
೨. ಗುಲಬರ್ಗಾ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ಕೇಂದ್ರಗಳ ಮುಖ್ಯಸ್ಥರ ಗಮನಕ್ಕಾಗಿ.
೩. ಕುಲಪತಿಗಳ ಆಪ್ತ ಕಾರ್ಯದರ್ಶಿ, ಕುಲಸಚಿವರ ಆಪ್ತ ಸಹಾಯಕರು ಗು.ವಿ. ಗುಲಬರ್ಗಾ.
೪. ಪ್ರಾಂಶುಪಾಲರು, ಸಹಕಾರಿ ಶಿಕ್ಷಣ ತರಬೇತಿ ಕೇಂದ್ರ, ಆದರ್ಶ ನಗರ, ಗುಲಬರ್ಗಾ.